<u>2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ ದಾವಣಗೆರೆ .</u>

SC. No.77-2023

ದೋ.ಸಾ. 7
ಫ್ರಾ.ಸಾ. 5
ಪ್ರ.ವ.ಬೊ.ದಿನಾಂಕ. 17-02-2026

| | | |
|---|---|---|
| ಹೆಸರು ಶ್ರೀ/ ಶ್ರೀ ಮತಿ. | - | ಜಗದೀಶ |
| ತಂದೆ / ಗಂಡನ ಹೆಸರು | - | ಪರಸಪ್ಪ |
| ವಯಸ್ಸು | - | 42 |
| ಉದ್ಯೋಗ | - | ಹಣ್ಣು ವ್ಯಾಪಾರ |
| ವಾಸ ಸ್ಥಳ | - | ಕೆಚ್ಚೇನಹಳ್ಳಿ |

ಮುಖ್ಯವಿಚಾರಣೆಃ - ಮಾನ್ಯ ಸರ್ಕಾರಿ ಅಭಿಯೋಜಕರಿಂದ

ನಾನು ಜಗಳೂರಿನ ಸ್ಟೇಟ್ ಬ್ಯಾಂಕ್ ಬಳಿ ಹಣ್ಣಿನ ವ್ಯಾಪಾರ ಮಾಡಿಕೊಂಡು ಜೀವನ ನಡೆಸುತ್ತಿದ್ದೇನೆ. ನನಗೆ ಫ್ರಾ.ಸಾ.1 ರಿಂದ 4 ಹಾಗೂ ಚಾ.ಸಾ.8 ರವರ ಪರಿಚಯ ಇರುತ್ತದೆ. ಅದೇ ರೀತಿ ನನಗೆ ನ್ಯಾಯಾಲಯದ ಮುಂದೆ ಇರುವ ಆರೋಪಿತರ ಪರಿಚಯ ಇರುತ್ತದೆ. ನಾನು ಫ್ರಾ.ಸಾ.1 ರವರ ತಂಗಿಯ ಗಂಡ. ಮೃತನು ಕಾಲೇಜಿಗೆ ಹೋಗುವಾಗ 2 ನೇ ಆರೋಪಿತಳ ಮಗಳಾದ ವಿನೋದಳನ್ನು ಪ್ರೀತಿ ಮಾಡುತ್ತಿದ್ದ. ಅಲ್ಲದೇ ಆಕೆಯು ಕೂಡ ಆತನನ್ನು ಪ್ರೀತಿಸುತ್ತಿದ್ದಳು. ಆ ರೀತಿ ಮೃತನು ಸದರಿ ವಿನೋದಳನ್ನು ಪ್ರೀತಿಸಿದ ವಿಚಾರಕ್ಕೆ ಸಂಬಂಧಿಸಿ 2 ನೇ ಆರೋಪಿತಳು ಮೃತನಿಗೆ ಕಿರುಕುಳ ನೀಡುವುದಲ್ಲದೇ, 1 ನೇ ಆರೋಪಿಯ ಅಂಗಡಿಯ ಎದುರು ಆರೋಪಿತರು ಮೃತನಿಗೆ ಹಲ್ಲೆ ಮಾಡಿರುತ್ತಾರೆ. ಆ ರೀತಿಯಾಗಿ ಕಳೆದ ಮೂರು ವರ್ಷದ ಹಿಂದೆ ಹಲ್ಲೆ ಮಾಡಿರುತ್ತಾರೆ.

ನಾನು ಹಣ್ಣು ಮಾರುತ್ತಿರುವ ಸ್ಥಳವು ಆಸ್ಪತ್ರೆಯಿಂದ ಸ್ವಲ್ಪ ದೂರದಲ್ಲಿ ಇದ್ದು, ಸಹಜವಾಗಿ ಮೂತ್ರ ವಿಸರ್ಜನೆಗೆ ಸದರಿ ಆಸ್ಪತ್ರೆಯ ಬಳಿಯೇ ನಾನು ಹೋಗುತ್ತಿದ್ದು, ಸದರಿ ದಿನವೂ ಕೂಡ ಮೂತ್ರ ವಿಸರ್ಜನೆಗೆ ಸದರಿ ಆಸ್ಪತ್ರೆಯ ಬಳಿ ಹೋಗುವಾಗ 1 ನೇ ಆರೋಪಿಯ ಟೀ ಶೆಡ್‌ನ ಬಳಿ ಗಲಾಟೆಯಾಗುತ್ತಿತ್ತು, ಆಗ ನಾನು ನೋಡಿದಾಗ ಆರೋಪಿತರು ಮೃತನಿಗೆ ಯಾಕೆ ವಿನೋದಳ ಹಿಂದೆ ಬಿದ್ದಿದ್ದೀಯಾ ಎಂದು ಹಲ್ಲೆ ಮಾಡುತ್ತಿದ್ದರು. ಅಲ್ಲದೇ ಆರೋಪಿತರು ಆತನಿಗೆ ಅವಾಚ್ಯ ಶಬ್ದಗಳಿಂದ ಬೈದಿರುವುದಲ್ಲದೇ, ಇವತ್ತು ನಿನ್ನನ್ನು ಕೊಲೆ ಮಾಡುತ್ತೇವೆ ಎಂದು ಬೆದರಿಸಿದ್ದಲ್ಲದೇ, ಇಂದು ನೀನಾದರೂ ಸಾಯಬೇಕು, ಇಲ್ಲವೇ ನಾವಾದರೂ ಸಾಯಿಸಬೇಕು ಎಂದು ಬೆದರಿಕೆ ಹಾಕಿರುತ್ತಾರೆ. ನಂತರ ನಾನು ಮೃತನನ್ನು ಆರೋಪಿತರಿಂದ ಬಿಡಿಸಿದ್ದು, ಮೃತನು ಆ ಸಮಯದಲ್ಲಿ ಅಳುತ್ತಿದ್ದು, ನಾನು ಆತನನ್ನು ಸಮಾಧಾನ ಮಾಡಿ ಮನೆಗೆ ಕಳುಹಿಸಿರುತ್ತೇನೆ.

ನಂತರ ನಾನು ಹಣ್ಣು ಮಾರುತ್ತ ರಾತ್ರಿ 9-30 ಗಂಟೆ ಆಗಿದ್ದು, ಆ ವೇಳೆಯಲ್ಲಿ ಮೃತನು ನೇಣು ಬಿಗಿದುಕೊಂಡು ತೀರಿಕೊಂಡಿದ್ದಾನೆ ಎಂಬ ವಿಚಾರ ತಿಳಿದುಬಂದಿದ್ದು, ಕೂಡಲೇ ನಾನು ಅಲ್ಲಿಂದ ಆಸ್ಪತ್ರೆಗೆ

ಹೋಗಿರುತ್ತೇನೆ. ಅಲ್ಲಿ ಹೋಗಿ ನೋಡಿದಾಗ ಅದಾಗಲೇ ಮೃತನು ಮೃತಪಟ್ಟಿದ್ದನು. ಮೃತನು 2 ನೇ ಆರೋಪಿತಳ ಮಗಳನ್ನು ಪ್ರೀತಿಸುತ್ತಿದ್ದು, ಅದಕ್ಕೆ ಆರೋಪಿತರು ಕಿರುಕುಳ ನೀಡಿದ್ದು, ತಾನು ಕಾಲೇಜಿಗೆ ಹೋದರೆ ತನ್ನ ಮರ್ಯಾದೆ ಹೋಗುತ್ತದೆ ಎಂದು ಭಾವಿಸಿ ಮೃತನು ಆತ್ಮಹತ್ಯೆ ಮಾಡಿಕೊಂಡಿರುತ್ತಾನೆ. ನಂತರ ಫ್ರಾ.ಸಾ.1 ರವರು ಈ ಕುರಿತಾಗಿ ದೂರು ದಾಖಲಿಸಿದ್ದು, ನಂತರ ಪೋಲೀಸರು ನನ್ನನ್ನು ವಿಚಾರಿಸಿರುತ್ತಾರೆ. ಸಾಕ್ಷಿಯು ನಿ.ಪಿ.2 ರಿಂದ 4 ರಲ್ಲಿ ಮೃತನ ಶರೀರವನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದ.**

ನನಗೆ ಫ್ರಾ.ಸಾ.1 ರವರು ಸಂಬಂಧಿಕರು ಎಂದರೆ ಸರಿ. ನಾನು ಹಣ್ಣು ಮಾರುತ್ತಿದ್ದ ಸ್ಥಳದಿಂದ ಜಗಳೂರಿನ ಸರ್ಕಾರಿ ಆಸ್ಪತ್ರೆಯ ಬಳಿ ಹೋಗಬೇಕು ಎಂದರೆ ಸಾಕ್ಷಿಯು ಮುನಿಸಿಪಾಲಿಟಿಯ ಒಳಗಡೆಯಿಂದ ಹೊಕ್ಕಿ ಹಳೆಯ ಆಸ್ಪತ್ರೆಯನ್ನು ದಾಟಿ ಅಲ್ಲಿಗೆ ಹೋಗಬೇಕು ಎಂದರೆ ಸರಿ. ಸದರಿ ಆಸ್ಪತ್ರೆಯ ಎದುರುಗಡೆ ರಸ್ತೆಯಲ್ಲಿ ವಿನಾಯಕ ಹೋಟೆಲ್ ಹಾಗೂ ಇತರೆ ಅಂಗಡಿ ಮುಗ್ಗಟ್ಟುಗಳು ಇವೆ ಎಂದರೆ ಸರಿಯಲ್ಲ. ಸದರಿ ರಸ್ತೆಯಲ್ಲಿ ವಿನಾಯಕ ಅಂಗಡಿ ಹಾಗೂ ಔಷಧಿ ಅಂಗಡಿಗಳು ಇದ್ದರೂ ಕೂಡ ಇಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸದರಿ ಸಾರ್ವಜನಿಕ ಆಸ್ಪತ್ರೆಯ ಎದುರು ಸಿಸಿ ಟಿವಿ ಇರುತ್ತದೆ ಎಂದರೆ ನನಗೆ ತಿಳಿದಿರುವುದಿಲ್ಲ. ಅಲ್ಲದೇ ಅದೇ ರಸ್ತೆಯಲ್ಲಿ ಇರುವ ವಿನಾಯಕ ಹೋಟೆಲ್ ಹಾಗೂ ಕಲ್ಲಯ್ಯ ಮೆಮೋರಿಯಲ್ ಆಸ್ಪತ್ರೆಗೂ ಕೂಡ ಸಿಸಿ ಟಿವಿ ಅಳವಡಿಸಿದ್ದಾರೆ ಎಂದರೆ ನನಗೆ ತಿಳಿದಿರುವುದಿಲ್ಲ. ಸದರಿ ಮೂತ್ರ ವಿಸರ್ಜನೆಗಾಗಿ ಹಳೆಯ ಆಸ್ಪತ್ರೆಯ ಶವಾಗಾರದ ಬಳಿ ಇರುವ ಸ್ಥಳದ ಬಳಿ ಹೋಗಬೇಕು ಎಂದರೆ ಸಾಕ್ಷಿಯು ಅಲ್ಲಿಯೂ ಹೋಗಬಹುದು, ಅಲ್ಲದೇ ಹೊಸ ಆಸ್ಪತ್ರೆಯ ಬಳಿಯೂ ಹೋಗಬಹುದು ಎಂದು ನುಡಿದಿರುತ್ತಾರೆ. ಹೊಸ ಆಸ್ಪತ್ರೆಯಲ್ಲಿ ಮೂತ್ರ ವಿಸರ್ಜನೆಗಾಗಿ ಬೇರೆ ಕಟ್ಟಡ ಇರುತ್ತದೆ. ಸದರಿ ನಾನು ಹಣ್ಣು ಮಾರುತ್ತಿದ್ದ ಸ್ಥಳದ ಸ್ಟೇಟ್ ಬ್ಯಾಂಕ್ ಪಕ್ಕದಲ್ಲಿಯೂ ಕೂಡ ಶೌಚಾಲಯ ಇದೆ ಎಂದರೆ ಸರಿಯಲ್ಲ. ಸದರಿ ಹೊಸ ಆಸ್ಪತ್ರೆಯ ವಾರ್ಡಿನ ಬಳಿ ಶೌಚಾಲಯ ಇದೆ ಎಂದರೆ ಸರಿ. ಈ ಪ್ರಕರಣಕ್ಕೆ ಪೂರಕವಾಗಲಿ ಎಂದು ನಾನು ಆ ದಿನ ಹೊಸ ಆಸ್ಪತ್ರೆಯ ಶೌಚಾಲಯಕ್ಕೆ ಮೂತ್ರ ವಿಸರ್ಜನೆಗೆ ಹೋಗಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸದರಿ ದಿನ ಮೃತನಿಗೆ ಯಾರು ಬೈದರು ಮತ್ತು ಹಲ್ಲೆ ಮಾಡಿದರು ಎಂದರೆ ಸಾಕ್ಷಿಯು ಆರೋಪಿತರು ಎಂದು ನುಡಿದಿರುತ್ತಾರೆ. ಸದರಿ ದಿನ ಆರೋಪಿತರು ಮೃತನಿಗೆ ಹಲ್ಲೆ ಮಾಡಿದ್ದಾಗಲಿ, ಅವಾಚ್ಯ ಶಬ್ದಗಳಿಂದ ಬೈದಿದ್ದಾಗಲಿ, ಜೀವ ಬೆದರಿಕೆ ಹಾಕಿದ್ದಾಗಲಿ ಹಾಗೂ ಸಾಯಿ ಎಂದು ಪ್ರಚೋದನೆ ನೀಡಿದ್ದಾಗಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಣ್ಣು ಮಾರುತ್ತಿದ್ದ ಸ್ಥಳದಿಂದ ಹೊಸ ಆಸ್ಪತ್ರೆಯ ಬಳಿ ಏನೇ ಗಲಾಟೆಯಾದರೂ ಕೂಡ ತಿಳಿದುಬರುವುದಿಲ್ಲ ಎಂದರೆ ಸಾಕ್ಷಿಯು ಬೊಬ್ಬೆ ಯೊಡೆದರೆ ಕೇಳುತ್ತದೆ ಎಂದು ನುಡಿದಿರುತ್ತಾರೆ. ನಾನು

ಯಾವುದೇ ಗಲಾಟೆ ನೋಡದೇ ಇದ್ದರೂ ಕುಡ ಫ್ರಾ.ಸಾ.1 ರವರು ನನಗೆ ಸಂಬಂಧಿಕರಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸದರಿ ಗಲಾಟೆಯ ವಿಚಾರ ಫ್ರಾ.ಸಾ.1 ರವರಿಗೆ ನಾನು ಗಲಾಟೆ ನಡೆದ ಎರಡು ದಿನಗಳ ಬಳಿಕ ಹೇಳಿರುತ್ತೇನೆ. ಆ ಸಮಯದಲ್ಲಿ ಬಹಳಷ್ಟು ಜನರು ಇದ್ದರು. ಫ್ರಾ.ಸಾ.1 ರವರಿಗೆ ಇಬ್ಬರು ಹೆಣ್ಣು ಮಕ್ಕಳು ಎಂದರೆ ಸರಿ. ಆ ಸಮಯದಲ್ಲಿ ಅವರ ಕಿರಿಯ ಮಗಳಿಗೆ ಮದುವೆಯಾಗಿರಲಿಲ್ಲ ಎಂದರೆ ಸರಿ. ಅವರ ಹಿರಿಯ ಮಗಳ ಗಂಡನ ಹೆಸರು ಜಗದೀಶ ಎಂದು ಆಗಿರುತ್ತದೆ. ಸದರಿ ಜಗದೀಶ ಕೂಡ ಪತ್ರಕರ್ತ ಎಂದರೆ ಸರಿ. ಬಸವರಾಜಪ್ಪ ತಂದೆ ಹನುಮಂತಪ್ಪ ಎನ್ನುವವರು ಕೂಡ ಫ್ರಾ.ಸಾ.1 ರವರ ಸಂಬಂಧಿಕರಾಗಿದ್ದು, ಅವರು ಕೂಡ ಪತ್ರಕರ್ತರು ಎಂದರೆ ಸರಿಯಲ್ಲ. ಸದರಿ ವಿಚಾರ ನನಗೆ ತಿಳಿದಿದ್ದರೂ ಕೂಡ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮೃತನು ವಿನೋದಳನ್ನು ಪ್ರೀತಿಸುತ್ತಿದ್ದು, ಆದರೆ ಆಕೆ ಅವನನ್ನು ಪ್ರೀತಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಆಕೆ ಅವನನ್ನು ಪ್ರೀತಿಸದೇ ಇದ್ದರೂ ಕೂಡ ಮೃತನೇ ಆಕೆಗೆ ಕಿರುಕುಳ ನೀಡುತ್ತಿದ್ದ ಎಂದರೆ ಸರಿಯಲ್ಲ. ಆಕೆ ಮಾಲತಿ ಪದವಿ ಪೂರ್ವ ಕಾಲೇಜಿನಲ್ಲಿ ಹಾಗೂ ಮೃತ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಓದುತ್ತಿದ್ದ ಎಂದರೆ ಸಾಕ್ಷಿಯು ಇಬ್ಬರು ಒಂದೇ ಕಾಲೇಜಿನಲ್ಲಿ ಓದುತ್ತಿದ್ದರು ಎಂದು ನುಡಿದಿರುತ್ತಾರೆ. ನನಗೆ ಆಕೆ ಓದುತ್ತಿದ್ದ ಕಾಲೇಜು ಬೇರೆ ಎಂದು ತಿಳಿದಿದ್ದರೂ ಕೂಡ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತನು ವಾಟ್ಸಪ್ ಹಾಗುಾ ಪೇಸ್ ಬುಕ್ ನಲ್ಲಿ ವಿನೋದಳ ಪೋಟೋ ಹಾಕಿ ಕಿರುಕುಳ ನೀಡುತ್ತಿದ್ದು, ಆ ವಿಚಾರಕ್ಕೆ ಸಂಬಂಧಿಸಿ 2 ನೇ ಆರೋಪಿತಳು ಫ್ರಾ.ಸಾ.1 ರವರ ಬಳಿ ಪ್ರಸ್ತಾಪ ಮಾಡಿದ್ದಳು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಫ್ರಾ.ಸಾ.1 ರವರು ಮೃತನ ಬಳಿ ತನ್ನ ಕಿರಿಯ ಮಗಳು ಮದುವೆಯಾದ ಬಳಿಕ ನಿನ್ನ ಮದುವೆಯ ಕುರಿತು ಪ್ರಸ್ತಾಪ ಮಾಡೋಣ ಎಂದು ಹೇಳಿದ್ದರು ಎಂದರೆ ಸರಿಯಲ್ಲ. ಮೃತನು ಸಾಯುವ ಪೂರ್ವದಲ್ಲಿಯೂ ಕೂಡ ಆತನ ಪಾಲಕರಿಗೆ ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ ಎಂದು ಹೆದರಿಸುತ್ತಿದ್ದ ಎಂದರೆ ಸರಿಯಲ್ಲ.

ಸದರಿ ಅಂಗಡಿಯ ಬಳಿ ಸದರಿ ದಿನ ಯಾವುದೇ ಗಲಾಟೆ ನಡೆಯದೇ ಇದ್ದರೂ ಕೂಡ ಆರೋಪಿತರು ಮತ್ತು ಮೃತನು ಅಲ್ಲಿ ಇಲ್ಲದೇ ಇದ್ದರೂ ಕೂಡ ಅಲ್ಲಿಯೇ ಇದ್ದು ಗಲಾಟೆ ಮಾಡಿದ್ದಾರೆ ಎಂದು ಪ್ರಕರಣಕ್ಕೆ ಅನುಕೂಲವಾಗಲು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ನುಡಿದ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿದ್ದು, ಫ್ರಾ.ಸಾ.1 ರವರು ನನ್ನ ಸಂಬಂಧಿಕರಾದ ಕಾರಣ ಅವರಿಗೆ ಸಹಾಯವಾಗಲು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ . ಹೇ. ಕೇ. ಸರಿಯಾಗಿದೆ.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.

<u>2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ ದಾವಣಗೆರೆ .</u>

SC. No.77-2023

ದೋ.ಸಾ. 5
ಫ್ರಾ.ಸಾ. 4
ಪ್ರ.ವ.ಬೊ.ದಿನಾಂಕ. 17-02-2026

| | | |
|---|---|---|
| ಹೆಸರು ಶ್ರೀ/ ಶ್ರೀ ಮತಿ. | - | ಶ್ರೀನಿವಾಸ |
| ತಂದೆ / ಗಂಡನ ಹೆಸರು | - | ಹನುಮಂತಪ್ಪ |
| ವಯಸ್ಸು | - | 38 |
| ಉದ್ಯೋಗ | - | ಗಾರಕೆಲಸ |
| ವಾಸ ಸ್ಥಳ | - | ಜಗಳೂರು |

ಮುಖ್ಯವಿಚಾರಣೆಃ - ಮಾನ್ಯ ಸರ್ಕಾರಿ ಅಭಿಯೋಜಕರಿಂದ

ನನಗೆ ಫ್ರಾ.ಸಾ.1 ರಿಂದ 3 ಹಾಗೂ ಚಾ.ಸಾ.7 ರವರ ಪರಿಚಯ ಇರುತ್ತದೆ. ಅದೇ ರೀತಿ ನನಗೆ ನ್ಯಾಯಾಲಯದ ಮುಂದೆ ಇರುವ ಆರೋಪಿತರ ಪರಿಚಯ ಇರುತ್ತದೆ. ಫ್ರಾ.ಸಾ.1 ರವರ ಮಗ ಮೃತ ಬಸವರಾಜ ತೀರಿಕೊಳ್ಳುವ ಮೊದಲು ಜಗಳೂರಿನ ಕಾಲೇಜಿಗೆ ಹೋಗುತ್ತಿದ್ದ. ಕಳೆದ ಮೂರು ವರ್ಷದ ಹಿಂದೆ ಮದ್ಯಾಹ್ನ 2-30 ಗಂಟೆ ಸಮಯದಲ್ಲಿ ನಾನು ಜಗಳೂರಿನ ಸರ್ಕಾರಿ ಆಸ್ಪತ್ರೆಯ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದೆ. ಸದರಿ ಆಸ್ಪತ್ರೆಯ ಎದುರು 1 ನೇ ಆರೋಪಿಯು ಚಹಾ ಅಂಗಡಿ ಹಾಕಿಕೊಂಡು ವ್ಯಾಪಾರ ಮಾಡುತ್ತಿದ್ದಾನೆ. ಆ ಸಮಯದಲ್ಲಿ ಆರೋಪಿತರು ಮೃತ ಬಸವರಾಜನ ಜೊತೆ ಜಗಳವಾಡುತ್ತಿದ್ದು, ನನಗೆ ಮೃತ ಬಸವರಾಜನ ಪರಿಚಯ ಇದ್ದ ಕಾರಣ ಏನಾಯಿತು ಎಂದು ನೋಡಲು ಅಲ್ಲಿಗೆ ಹೋಗಿರುತ್ತೇನೆ. ಮೃತ ಬಸವರಾಜನು 2 ನೇ ಆರೋಪಿತಳ ಮಗಳನ್ನು ಪ್ರೀತಿಸುತ್ತಿದ್ದ ಕಾರಣ 2 ನೇ ಆರೋಪಿತಳು ಮೃತನಿಗೆ ಬೈಯ್ಯುತ್ತಿದ್ದು, ಅದೇ ವಿಚಾರಕ್ಕೆ ಸಂಬಂಧಿಸಿ ಸದರಿ ದಿನ ಆರೋಪಿತರು ಮೃತನಿಗೆ ಅವಾಚ್ಯ ಶಬ್ದಗಳಿಂದ ಬೈದು, ಪ್ರೀತಿಸಬೇಡ ಎಂದು ಹೇಳಿ ಎಲ್ಲಿಯಾದರೂ ಹೋಗಿ ಸಾಯಿ ಎಂದು ಹೇಳಿದ್ದಲ್ಲದೇ, ಆರೋಪಿತರು ಆತನಿಗೆ ಹಲ್ಲೆ ಮಾಡಿದ್ದು, ನಾನು ಜಗಳ ಬಿಡಿಸಿ ಆತನನ್ನು ಮನೆಗೆ ಕಳುಹಿಸಿರುತ್ತೇನೆ.

ತದನಂತರ ಅದೇ ದಿನ ರಾತ್ರಿ 9-30 ಗಂಟೆಗೆ ಮೃತನು ಆತನ ಹೊಸಮನೆಯಲ್ಲಿ ನೇಣು ಬಿಗಿದುಕೊಂಡು ಮೃತಪಟ್ಟಿರುತ್ತಾನೆ ಎನ್ನುವ ವಿಚಾರ ತಿಳಿದುಬಂದಿರುತ್ತದೆ. ನಂತರ ಆತನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಲಾಗಿದ್ದು, ಅಲ್ಲಿ ಆತ ಅದಾಗಲೇ ಮೃತಪಟ್ಟಿದ್ದಾನೆ ಎಂದು ತಿಳಿಸಿರುತ್ತಾರೆ. ನಂತರ ಫ್ರಾ.ಸಾ.1 ರವರ ಈ ಕುರಿತು ದೂರನ್ನು ನೀಡಿರುತ್ತಾರೆ. ನಂತರ ಪೋಲೀಸರು ನನ್ನನ್ನು ವಿಚಾರಿಸಿರುತ್ತಾರೆ. ಸಾಕ್ಷಿಯು ನಿ.ಪಿ.2 ರಿಂದ 4 ನ್ನು ನೋಡಿ ಮೃತನ ದೇಹವನ್ನು ಗುರುತಿಸಿರುತ್ತಾರೆ.

**ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದ.**

ನನ್ನ ತಾಯಿ ಪ್ರಾ.ಸಾ.1 ರವರ ಅಕ್ಕ ಎಂದರೆ ಸರಿ. ಮೃತನು ನನಗೆ ಅಳಿಯನಾಗಬೇಕು ಎಂದರೆ ಸರಿ. ನನಗೆ ಸದರಿ ದಿನ ಗಲಾಟೆ ನಡೆದ ದಿನದ ದಿನಾಂಕ ತಿಳಿದಿರುವುದಿಲ್ಲ. ಮೃತನು ತೀರಿಕೊಂಡ ದಿನ ನಾನು ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ನಾನು ಆ ಸಮಯದಲ್ಲಿ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದು ಸುದ್ದಿ ತಿಳಿದು ಊರಿಗೆ ಬಂದಿರುತ್ತೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಪೂರಕವಾಗಲಿ ಎಂದು ನಾನು ಬೆಂಗಳೂರಿನಲ್ಲಿ ಇದ್ದರೂ ಕೂಡ ಊರಿನಲ್ಲಿ ಇದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

1 ನೇ ಆರೋಪಿಯ ಚಹಾ ಅಂಗಡಿಯ ಬಳಿ ಸದರಿ ದಿನ ಬಹಳಷ್ಟು ಸಾರ್ವಜನಿಕರು ಸೇರಿದ್ದರು. ಸದರಿ ದಿನ ಆರೋಪಿತರು ಮಾತ್ರ ಸದರಿ ಅಂಗಡಿಯಲ್ಲಿ ಇದ್ದರು. ಸದರಿ ದಿನ ಇಬ್ಬರು ಆರೋಪಿತರು ಸೇರಿ ಮೃತನಿಗೆ ಹಲ್ಲೆ ಮಾಡಿರುತ್ತಾರೆ. ನಾನು ಪೋಲೀಸರಿಗೆ ಹೇಳಿಕೆ ನೀಡುವಾಗ ಆರೋಪಿತರಿಬ್ಬರು ಸೇರಿ ಮೃತನಿಗೆ ಹಲ್ಲೆ ಮಾಡಿದ್ದಾರೆ ಎಂದು ಹೇಳಿರುತ್ತೇನೆ. ನನಗೆ ಓದಲು ಬರುವುದಿಲ್ಲ. ಪೋಲೀಸರು ನನ್ನ ಹೇಳಿಕೆಯಲ್ಲಿ ಏನೇನು ಬರೆದುಕೊಂಡಿದ್ದಾರೆ ಎನ್ನುವ ವಿಚಾರ ನನಗೆ ತಿಳಿದಿರುವುದಿಲ್ಲ. ಆರೋಪಿತರು ಸದರಿ ದಿನ ಮೃತನಿಗೆ ಅವಾಚ್ಯ ಶಬ್ದಗಳಿಂದ ಬೈದಿದ್ದಾಗಲಿ, ಜೀವ ಬೆದರಿಕೆ ಹಾಕಿದ್ದಾಗಲಿ ಹಾಗೂ ಹಲ್ಲೆ ಮಾಡಿದ್ದಾಗಲಿ ಹಾಗೂ ನೇಣು ಹಾಕಿಕೊಂಡು ಸಾಯಿ ಎಂದು ಪ್ರಚೋದನೆ ನೀಡಿದ್ದಾಗಲಿ ಇರುವುದಿಲ್ಲ, ಆತನೇ ಮನನೊಂದು ನೇಣು ಹಾಕಿಕೊಂಡು ತೀರಿಕೊಂಡಿದ್ದಾನೆ ಎಂದರೆ ಸರಿಯಲ್ಲ.

ಪ್ರಾ.ಸಾ.1 ರವರಿಗೆ ಇಬ್ಬರು ಹೆಣ್ಣು ಮಕ್ಕಳಿದ್ದಾರೆ ಎಂದರೆ ಸರಿ. ಅವರಲ್ಲಿ ದೊಡ್ಡ ಮಗಳಿಗೆ ಮದುವೆಯಾಗಿದೆ ಎಂದರೆ ಸರಿ. ಚಾ.ಸಾ.9 ಆಕೆಯ ಗಂಡ ಎಂದರೆ ಸರಿ. ವರದಿಗಾರ ಬಸವರಾಜ ಎನ್ನುವವರು ಕೂಡ ಪ್ರಾ.ಸಾ.1 ರವರ ಸಂಬಂಧಿಕ ಎಂದರೆ ಸರಿ. ಮೃತ ತೀರಿಕೊಳ್ಳುವ ಸಮಯದಲ್ಲಿ ಆತನ ತಂಗಿಯ ಮದುವೆ ಆಗಿರಲಿಲ್ಲ ಎಂದರೆ ಸರಿ. ಆಕೆಯ ಮದುವೆಯ ಬಳಿಕ ನಿನ್ನ ಮದುವೆಯ ಬಗ್ಗೆ ಯೋಚನೆ ಮಾಡೋಣ ಎಂದು ಪ್ರಾ.ಸಾ.1 ಮತ್ತು ಅವರ ಮನೆಯವರು ಮೃತನಿಗೆ ಹೇಳುತ್ತಿದ್ದರು ಎಂದರೆ ಸರಿ. ಮೃತನು 2 ನೇ ಆರೋಪಿಯ ಮಗಳ ಹಿಂದೆ ಪ್ರೀತಿಸು ಎಂದು ಹಿಂದಕ್ಕೆ ಬಿದ್ದು ಪೀಡಿಸುತ್ತಿದ್ದ, ಅದಕ್ಕೆ ಆಕೆ ನಿರಾಕರಿಸಿದ್ದಳು ಎಂದರೆ ಸರಿ. ಅಲ್ಲದೇ ಮೃತನು ಸದರಿ ಹುಡುಗಿಯ ಮೊಬೈಲ್ ಗೆ ಸಂದೇಶಗಳನ್ನು ಕೂಡ ಕಳುಹಿಸುತ್ತಿದ್ದ ಎಂದರೆ ಸರಿಯಲ್ಲ. ಅಲ್ಲದೇ ಪೇಸ್ ಬುಕ್ ನಲ್ಲಿಯೂ ಕುಡ ಮೃತನು 2 ನೇ ಆರೋಪಿಯ ಮಗಳ ಪೋಟೋವನ್ನು ಹಾಕಿ ತೊಂದರೆ ನೀಡುತ್ತಿದ್ದ ಎಂದರೆ ನನಗೆ ತಿಳಿದಿರುವುದಿಲ್ಲ. ಸದರಿ ವಿಚಾರ ನನಗೆ ತಿಳಿದಿದ್ದರೂ ಕೂಡ ತಿಳಿದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ರೀತಿ ತೊಂದರೆ ನೀಡುವುದನ್ನು ನೋಡಿ 2 ನೇ ಆರೋಪಿತಳು ಪ್ರಾ.ಸಾ.1 ರವರ ಬಳಿ ಹೋಗಿ ಮೃತನಿಗೆ ಆ ರೀತಿ ತೊಂದರೆ ನೀಡಬೇಡ ಎಂದು ಬುದ್ದಿ ಹೇಳಿ ಎಂದು ಹೇಳಿಕೊಂಡಿದ್ದಳು ಎಂದರೆ ಸರಿ. ಅಲ್ಲದೇ ಮೃತನ ಕಾಟ ತಡೆಯಲಾರದೇ 2 ನೇ ಆರೋಪಿತಳು ತನ್ನ ಸಂಸಾರದೊಂದಿಗೆ ಜಗಳೂರಿಗೆ ಹೋಗಿ ವಾಸ ಮಾಡಿದ್ದಳು ಎಂದರೆ ಸರಿ. ಮೃತನು ಆತನ ಪಾಲಕರು 2 ನೇ ಆರೋಪಿಯ ಮಗಳ ಜೊತೆ ಮದುವೆ ಮಾಡಲು ಒಪ್ಪದೇ

ಇರುವ ಕಾರಣ ಆತನೇ ಮನನೊಂದು ನೇಣು ಹಾಕಿಕೊಂಡು ಮೃತಪಟ್ಟಿದ್ದು, ಸದರಿ ವಿಚಾರ ನಮಗೆ ತಿಳಿದಿದ್ದರೂ ಕೂಡ ಆರೋಪಿತರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿ ಈಗ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಲ್ಲದೇ ಮೃತನು ಅವರ ಪಾಲಕರ ಬಳಿ ಎರಡು ಬಾರಿ ಮದುವೆಯ ಕುರಿತಾಗಿ ಪ್ರಸ್ತಾಪಿಸಿದ್ದ ಎಂದರೆ ಸಾಕ್ಷಿಯು ಒಂದು ಬಾರಿ ಪ್ರಸ್ತಾಪಿಸಿದ್ದ ಎಂದು ನುಡಿದಿರುತ್ತಾರೆ. ಅದೇ ರೀತಿ ಸದರಿ ಮದುವೆ ವಿಚಾರಕ್ಕೆ ಸಂಬಂಧಿಸಿ ಎರಡು ಬಾರಿ ಮೃತನು ಅವರ ಪಾಲಕರಿಗೆ ಹೆದರಿಸಲು ನೇಣು ಬಿಗಿದುಕೊಳ್ಳುವ ಯತ್ನ ಮಾಡಿದ್ದ ಎಂದರೆ ಸಾಕ್ಷಿಯು ಒಂದು ಬಾರಿ ಮಾಡಿದ್ದ ಎಂದು ನುಡಿದಿರುತ್ತಾರೆ. ಫ್ರಾ.ಸಾ.1 ರವರು ನನಗೆ ಸಂಬಂಧಿಕರಾದ ಕಾರಣ ವಿಚಾರ ತಿಳಿಯದೇ ಇದ್ದರೂ ಕೂಡ ಪ್ರಕರಣಕ್ಕೆ ಪೂರಕವಾಗಲು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸದರಿ ಜಗಳೂರು ಆಸ್ಪತ್ರೆಗೂ, ಅಲ್ಲಿ ಇರುವ ವಿನಾಯಕ ಹೋಟೆಲ್ ಗೂ ಹಾಗೂ ಕಲ್ಲಯ್ಯ ಮೆಮೋರಿಯಲ್ ಆಸ್ಪತ್ರೆಗೂ ಸಿಸಿ ಟಿವಿ ಅಳವಡಿಸಿದ್ದಾರೆ ಎಂದರೆ ಸರಿ. ಸದರಿ ಮೂರು ಕಟ್ಟಡಗಳ ನಡುವೆ 1 ನೇ ಆರೋಪಿಯ ಚಹಾ ಅಂಗಡಿ ಇದೆ ಎಂದರೆ ಸರಿ. ನಾನು ಮುಖ್ಯ ವಿಚಾರಣೆಯಲ್ಲಿ ನುಡಿದಿರುವ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. 1 ನೇ ಆರೋಪಿಯ ಅಂಗಡಿಯ ಬಳಿ ಯಾವುದೇ ಘಟನೆ ಸದರಿ ದಿನ ನಡೆದಿಲ್ಲ ಎಂದರೆ ಸರಿ. ಅಲ್ಲಿ ಮೃತನಾಗಲಿ ಆರೋಪಿತರಾಗಲಿ ಇರಲಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ . ಹೇ. ಕೇ. ಸರಿಯಾಗಿದೆ.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.

SC. No.77-2023
ಪಿಡಬ್ಲ್ಯೂ-2
ದಿಃ 17-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.
**ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದ.**

ನಾನು ಕೆಚ್ಚೇನಹಳ್ಳಿಯ ಖಾಯಂ ನಿವಾಸಿಯಾಗಿರುತ್ತೇನೆ. ನನಗೆ ಫ್ರಾ.ಸಾ.1 ರವರು ತುಂಬಾ ವಿಶ್ವಾಸಿಕರು ಎಂದರೆ ಸರಿ. ಅಲ್ಲದೇ ಈ ಪ್ರಕರಣದಲ್ಲಿ ಮೃತಪಟ್ಟ ಬಸವರಾಜ ಕೂಡ ನನಗೆ ತುಂಬಾ ಆತ್ಮೀಯ ಎಂದರೆ ಸರಿ. ನಾನು ಸೇಬು ಹಣ್ಣಿನ ವ್ಯಾಪಾರ ಮಾಡುತ್ತಿದ್ದೇನೆ. ಮೃತ ಬಸವರಾಜ 2 ನೇ ಆರೋಪಿತಳ ಮಗಳನ್ನು ಪ್ರೀತಿಸುತ್ತಿರುವ ವಿಚಾರ ನನಗೆ ಖುದ್ದು ಮಾಹಿತಿ ಇರುತ್ತದೆ. ನನಗೆ ಮೃತನೇ ಸದರಿ 2 ನೇ ಆರೋಪಿತಳ ಮಗಳ ಹಿಂದೆ ಪ್ರೀತಿಸು ಎಂದು ಹಿಂದೆ ಬಿದ್ದಿದ್ದ, ಆದರೆ ಆಕೆ ಅವನನ್ನು ಪ್ರೀತಿಸುತ್ತಿರಲಿಲ್ಲ ಎಂದರೆ ನನಗೆ ತಿಳಿದಿರುವುದಿಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ ಗಲಾಟೆಯು ಮೂರು ವರ್ಷಗಳ ಹಿಂದೆ ನಡೆದಿದ್ದು, ಆದರೆ ನನಗೆ ದಿನ ಮತ್ತು ದಿನಾಂಕ ನೆನಪು ಇರುವುದಿಲ್ಲ. ಅಲ್ಲದೇ ನನಗೆ ಅದರ ವಾರ ಯಾವುದು ಎಂದು ಕೂಡ ನೆನಪು ಇರುವುದಿಲ್ಲ.

ಸದರಿ ಜಗಳೂರಿನ ಸರ್ಕಾರಿ ಆಸ್ಪತ್ರೆಯ ಎದುರು ಸಿಸಿ ಟಿವಿ ಹಾಕಲಾಗಿದೆ ಎಂದರೆ ಸರಿ. ಸದರಿ ಆಸ್ಪತ್ರೆಯಿಂದ ಬಸ್ಟ್ಯಾಂಡ್ ಕಡೆಗೆ ಹೋಗುವ ದಾರಿಯಲ್ಲಿ ಒಂದು ವಿನಾಯಕ ಎಂಬ ಹೆಸರಿನ ಹೋಟೆಲ್ ಇದ್ದು, ಅದಕ್ಕೂ ಕೂಡ ಸಿಸಿ ಟಿವಿ ಅಳವಡಿಸಲಾಗಿದೆ ಎಂದರೆ ಸರಿ. ಅದೇ ದಾರಿಯಲ್ಲಿ ಮುಂದುವರೆದರೆ ಕಲ್ಲಯ್ಯ ಮೆಮೋರಿಯಲ್ ಆಸ್ಪತ್ರೆ ಕೂಡ ಇದೆ ಎಂದರೆ ಸರಿ. ಸದರಿ ಆಸ್ಪತ್ರೆಗೂ ಕೂಡ ಸಿಸಿ ಟಿವಿ ಅಳವಡಿಸಿದ್ದಾರೆ ಎಂದರೆ ನಾನು ನೋಡಿರುವುದಿಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ನುಡಿದಂತೆ ಸದರಿ ಜಾಗದಲ್ಲಿ ಯಾವುದೇ ಗಲಾಟೆ ನಡೆದಿಲ್ಲ ಎಂದರೆ ಸರಿಯಲ್ಲ. ಸದರಿ ಗಲಾಟೆ ಸಮಯದಲ್ಲಿ ಆರೋಪಿತರು ಮೃತನಿಗೆ ಅವಾಚ್ಯ ಶಬ್ದಗಳಿಂದ ಬೈದದ್ದಾಗಲಿ, ಜೀವ ಬೆದರಿಕೆ ಹಾಕಿದ್ದಾಗಲಿ ಹಾಗೂ ಹೋಗಿ ಸಾಯಿ ಎಂದು ಪ್ರಚೋದನೆ ನೀಡಿದ್ದಾಗಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಆ ರೀತಿ ಆರೋಪಿತರು ಯಾವುದೇ ಅಪರಾಧ ಮಾಡದೇ ಇದ್ದರೂ ಕೂಡ ನನಗೆ ಫ್ರಾ.ಸಾ.1 ಹಾಗೂ ಮೃತ ಪರಿಚಯನಿದ್ದ ಕಾರಣ ಈ ಪ್ರಕರಣಕ್ಕೆ ಸಹಾಯವಾಗಲು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮೃತ ಬಸವರಾಜನಿಗೆ ಒಂದು ತಂಗಿ ಕೂಡ ಇದ್ದಳು ಎಂದರೆ ಸರಿಯಲ್ಲ. ತಂಗಿ ಇದ್ದರೂ ಕೂಡ ಆಕೆ ಇರುವುದಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಕೆಯ ಮದುವೆಯ ಬಳಿಕ ನಿನ್ನ ಮದುವೆ ಮಾಡೋಣ ಎಂದು ಫ್ರಾ.ಸಾ.1 ಮತ್ತು ಅವರ ಮನೆಯವರು ಮೃತನಿಗೆ ಹೇಳಿದ್ದರು ಎಂದರೆ ಸರಿಯಲ್ಲ. ಆ

ಸಮಯದಲ್ಲಿ ಮೃತನು ಫ್ರಾ.ಸಾ.1 ರವರಿಗೆ ನೀವು ಹೋಗಿ 2 ನೇ ಆರೋಪಿತಳ ಬಳಿ ಮದುವೆಯ ಕುರಿತು ಪ್ರಸ್ತಾಪ ಮಾಡಿ ಎಂದು ಪೀಡಿಸುತ್ತಿದ್ದ ಎಂದರೆ ನನಗೆ ತಿಳಿದಿರುವುದಿಲ್ಲ. ನನಗೆ ಈ ಎಲ್ಲಾ ವಿಚಾರಗಳು ತಿಳಿದಿದ್ದರೂ ಕೂಡ ತಿಳಿದಿಲ್ಲ ಎಂದು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಆರೋಪಿತಳು ಮತ್ತು ಅವರ ಸಂಸಾರ ಮೃತನ ಕಾಟ ತಡೆಯಲಾರದೆ ಜಗಳೂರಿಗೆ ಹೋಗಿ ವಾಸವಾಗಿರುತ್ತಾರೆ ಎಂದರೆ ಸಾಕ್ಷಿಯು ಜಗಳೂರಿಗೆ ಹೋಗಿ ವಾಸ ಮಾಡಿರುವುದು ನಿಜ, ಆದರೆ ಕಾಟ ತಡೆಯಲಾರದೇ ಎನ್ನುವ ವಿಚಾರ ನನಗೆ ತಿಳಿದಿಲ್ಲ ಎಂದು ನುಡಿದಿರುತ್ತಾರೆ. ಮೃತನ ಕಾಟ ತಡೆಯಲಾರದೇ 2 ನೇ ಆರೋಪಿ ಮತ್ತು ಅವರ ಸಂಸಾರ ಜಗಳೂರಿಗೆ ಹೋಗಿ ವಾಸವಾಗಿರುವ ವಿಚಾರ ನನಗೆ ತಿಳಿದಿದ್ದರೂ ಕೂಡ ಪ್ರಕರಣಕ್ಕೆ ಧಕ್ಕೆಯಾಗುತ್ತದೆ ಎಂದು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಚಾ.ಸಾ.7 ಫ್ರಾ.ಸಾ.1 ರವರ ದೊಡ್ಡ ಮಗಳ ಗಂಡ ಎಂದರೆ ಸರಿ. ಬಸವರಾಜ ಎನ್ನುವ ವರದಿಗಾರರು ಫ್ರಾ.ಸಾ.1 ರವರ ಸಂಬಂಧಿಕರು ಎಂದರೆ ಸರಿ. ನಾನು ಚಾ.ಸಾ.7, ಫ್ರಾ.ಸಾ.1 ಹಾಗೂ ವರದಿಗಾರ ಬಸವರಾಜ ಎನ್ನುವವರ ಮಾತನ್ನು ಕೇಳಿಕೊಂಡು ನನಗೆ ಈ ಪ್ರಕರಣದ ಮಾಹಿತಿ ಇಲ್ಲದೇ ಇದ್ದರೂ ಕೂಡ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಫ್ರಾ.ಸಾ.1 ಮತ್ತು ಆತನ ಮನೆಯವರು ಮೃತನಿಗೆ 2 ನೇ ಆರೋಪಿತಳ ಮಗಳ ಜೊತೆ ಮದುವೆ ಮಾಡಲು ನಿರಾಕರಿಸಿದ ಕಾರಣ ಮೃತನು ಮನನೊಂದು ಆತನೇ ಆತ್ಮಹತ್ಯೆ ಮಾಡಿಕೊಂಡಿರುತ್ತಾನೆ ಎಂದರೆ ನನಗೆ ತಿಳಿದಿರುವುದಿಲ್ಲ. ನನಗೆ ಸದರಿ ವಿಷಯ ತಿಳಿದಿದ್ದರೂ ಕೂಡ ಪ್ರಕರಣಕ್ಕೆ ಧಕ್ಕೆಯಾಗುತ್ತದೆ ಎಂದು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತನ ಸಾವಿಗೆ ಆರೋಪಿತರು ಕಾರಣರಲ್ಲ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಫ್ರಾ.ಸಾ.1 ಹಾಗೂ ಚಾ.ಸಾ.9 ರವರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿಯನ್ನು ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಪೋಲೀಸರು ನನ್ನ ಹೇಳಿಕೆಯನ್ನು ಎಷ್ಟು ದಿನಗಳು ಬಿಟ್ಟು ಪಡೆದುಕೊಂಡಿದ್ದಾರೆ ಎಂದು ನನಗೆ ಈಗ ನೆನಪು ಇರುವುದಿಲ್ಲ. ನಾನು ಪೋಲೀಸರ ಎದುರು ಯಾವುದೇ ಹೇಳಿಕೆ ನೀಡದೇ ಇದ್ದರೂ ಕೂಡ ನೀಡಿದ್ದೇನೆ ಎಂದು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಭಿಯೋಜಕರು ಮಾಡಿದ ಪಾಟೀಸವಾಲಿನ ವಿಚಾರ ನನಗೆ ತಿಳಿಯದೇ ಇದ್ದರೂ ಕೂಡ ಅವರು ಕೇಳಿದ ಪ್ರಶ್ನೆಗಳಿಗೆ ಹೌದು ಎಂದು ಉತ್ತರ ನೀಡಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ . ಹೇ. ಕೇ. ಸರಿಯಾಗಿದೆ.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.